ದಿನಾಂಕಃ **12-06-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಆರ್.ಎಸ್.ರವರಿಂದ ಃ</u>

**1.** ನಾನು ಐ.ಟಿ.ಐ. ಓದಿದ್ದೇನೆ. ನಾನು ವ್ಯವಸಾಯಗಾರ. ನನ್ನ ತಂದೆ ಸಹ ವ್ಯವಸಾಯಗಾರ. ನನ್ನ ತಂದೆ ಲೇವಾ ದೇವಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಪ್ರತಿವಾದಿಯನ್ನು ನೋಡಿಲ್ಲ. ನನ್ನ ತಂದೆ ಪ್ರತಿವಾದಿಗೆ ಸಾಲ ಕೊಟ್ಟ ಬಗ್ಗೆ ಹೇಳಿದ್ದರು. ನನ್ನ ತಂದೆ ಬೇರೆಯವರಿಗೆ ಸಾಲ ಕೊಟ್ಟ ಬಗ್ಗೆ ನನಗೆ ಹೇಳಿಲ್ಲ. ಪ್ರತಿವಾದಿಗೆ ಹಣವನ್ನು ಎಲ್ಲಿ ಕೊಟ್ಟರು ಎಂದು ನನ್ನ ತಂದೆ ನನಗೆ ಹೇಳಿಲ್ಲ. ನಿಪಿ-1 ರ ದಾಖಲಾತಿ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-1 ಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ ಎಂದರೆ ಜಯಕುಮಾರ್ ಮತ್ತು ಕೆ. ಕೃಷ್ಣ ಎಂದು ಸಾಕ್ಷಿಯು ನುಡಿಯುತ್ತಾರೆ. ಪ್ರತಿವಾದಿ ನನ್ನ ತಂದೆಗೆ ಸಾಲದ ಬಾಬ್ತು ಹಣವನ್ನು ವಾಪಸ್ಸು ನೀಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಸಾಲವನ್ನು ಮರುಪಾವತಿಸಿದರೂ ಸಹ ನನ್ನ ತಂದೆ ಪ್ರೋನೋಟ್ ಅನ್ನು ವಾಪಸ್ಸು ನೀಡದೆ ಹಾಗೇ ಇಟ್ಟುಕೊಂಡು ಸುಳ್ಳು ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ. ವಾದ ಪತ್ರದ ಮಾಹಿತಿಗಳು ಭಾಗಶಹ ನನಗೆ ಗೊತ್ತಿದೆ. ಪ್ರತಿವಾದಿ ಸರ್ಕಾರಿ ನೌಕರರಾಗಿದ್ದು, ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**